ಅ) ಹೌದು

ಆ) ಈ ಕೆಲಸ ನಿರ್ವಹಣೆ ಮಾಡಿದ ಅಧಿಕಾರಿಯ ಮೇಲೆ ಇಲಾಖಾ ವಿಚಾರಣೆ ಪ್ರಗತಿಯಲ್ಲಿರುತ್ತದೆ.

ಇ) ಇಲ್ಲ

ಈ) ಹೌದು

ಉ) ಹೌದು

## ಯು.ಕೆ.ಪಿ.ಯ ಅಲಮಟ್ಟಿ ಜಲಾಶಯದಿಂದ ಮುಳಿಗಡೆ ಆಗಿರುವ ಕೇಂದ್ರಗಳಲ್ಲಿ ಪುನರ್ವಸತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆ

79 (66) - ಶ್ರೀ ಪೂಜಾರ್ ಪಿ ಹೆಚ್ (ಬಾಗಲಕೋಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯುಕೆಪಿಯ ಅಲಮಟ್ಟಿ ಜಲಾಶಯದಿಂದ ಮುಳುಗಡೆ ಆದ ನಂತರ ನಿರ್ಮಾಣವಾದ ಬಾಗಲಕೋಟೆ ತಾಲ್ಲೂಕಿನ ಸಿಮೀಕೇರಿ, ಬೆಣ್ಣೂರು, ತುಳಸಿಗೇರಿ ಪುನರ್ವಸತಿ ಕೇಂದ್ರಗಳಲ್ಲಿ ಸುಮಾರು 8-10 ಸಾವಿರಕ್ಕಿಂತ ಹೆಚ್ಚು ಜನವಸತಿ ಇರುವ ಕಾರಣ ಆರೋಗ್ಯ ಸಮಸ್ಯೆ ಉಂಟಾಗಿದ್ದು ಅಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಬೇಕೆನ್ನುವ ವಿಚಾರ ಸರ್ಕಾರ ಗಮನಿಸಿದೆಯೇ;

ಆ) ಹಾಗಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು? ವಿವರಿಸುವುದು.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು

ಆ) ಸರ್ಕಾರಿ ನಿಬಂಧನೆಗಳ ಹಾಗೂ ಮಾರ್ಗಸೂಚಿಯ ಪ್ರಕಾರ ಮತ್ತು ಜನಸಂಖ್ಯೆ ಕಡಿಮೆ ಇರುವುದರಿಂದ, ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆ ಮಾಡಲು ಬರುವುದಿಲ್ಲ. ಈಗ ಹಾಲಿ ರಾಂಪುರ ಮತ್ತು ಕಲಾದಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಬೆಣ್ಣೂರು ತುಳಸಿಗೇರಿ ಮತ್ತು ಸೀಮೆಗೇರಿ ಉಪಕೇಂದ್ರಗಳ ಮುಖಾಂತರ ಆರೋಗ್ಯ ಸೌಲಭ್ಯ ಒದಗಿಸಲಾಗುತ್ತಿದೆ.

## ಬಾಗಲಕೋಟೆ ಜಿಲ್ಲೆಗೆ ಉದ್ಯೋಗ ಭರವಸೆ ಅಡಿ ಒದಗಿಸಿದ ಹಣ, ಖರ್ಚಾದ ಹಣದ ಬಗ್ಗೆ

80 (67) - ಶ್ರೀ ಪೂಜಾರ್ ಪಿ ಹೆಚ್ (ಬಾಗಲಕೋಟೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಜಿಲ್ಲಾ ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1999-2000, 2000-01, 2001-2002ರ ಸಾಲುಗಳಲ್ಲಿ ಬಾಗಲಕೋಟೆ ಜಿಲ್ಲೆಗೆ ಉದ್ಯೋಗ ಭರವಸೆ ಯೋಜನೆಯಡಿ ಒದಗಿಸಲಾದ ಮತ್ತು ವೆಚ್ಚ ಮಾಡಿದ ಹಣವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಆ) 1999-2000, 2000-2001, 2001-2002ರ ಸಾಲುಗಳಲ್ಲಿ ಬಾಗಲಕೋಟೆ ಜಿಲ್ಲೆಗೆ